KSMC

Karnataka State Minerals Corporation Ltd.
(A GOVT. OF KARNATAKA UNDERTAKING)
ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿ.
(ಕರ್ನಾಟಕ ಸರ್ಕಾರದ ಉದ್ಯಮ)

ಕೆಎಸ್ಎಂಸಿಎಲ್/ಸಿವಿಲ್/ಸುಕಅಗ/ರತಗೋ&ಗಾಡ್ರೈ/1106-2/2023-24/1129 ದಿ: 25.10.2023

**<u>3ನೇ ಪಕ್ಷಕಾರರ ತಪಾಸಣಾ ವರದಿಗೆ ದರಪಟ್ಟಿಯ ದರ ಆಹ್ವಾನಿಸುವ ಕುರಿತು.</u>**

**ವಿಷಯ:** ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸುಬ್ಬರಾಯನಹಳ್ಳಿ ಕಬ್ಬಿಣ ಅದಿರು ಗಣಿಯ (M.L no: 2629) ಡಂಪ್ PTD-1 ರಲ್ಲಿ ಅನುಮೋದಿತ ಮೈನಿಂಗ್ ಪ್ಲಾನ್ ಪ್ರಕಾರ ರಕ್ಷಣಾತ್ಮಕ ತಡೆಗೋಡೆ ಮತ್ತು ಗಾರ್ಲೆಂಡ್ ಡ್ರೈನ್ ನಿರ್ಮಿಸುವ ಕಾಮಗಾರಿಯನ್ನು ಟೆಂಡರ್ ಗುತ್ತಿಗೆದಾರರು ನಿರ್ವಹಿಸಿದ್ದು, ಇದರ ಗುಣಮಟ್ಟದ ಕುರಿತು 3ನೇ ಪಕ್ಷಕಾರರ ವರದಿ ಪಡೆಯುವ ಬಗ್ಗೆ ದರಪಟ್ಟಿಯ ದರ ಆಹ್ವಾನ ಕುರಿತು.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಸಂಸ್ಥೆಯು ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸುಬ್ಬರಾಯನಹಳ್ಳಿ ಕಬ್ಬಿಣ ಅದಿರು ಗಣಿಯ (M.L no: 2629) ಡಂಪ್ PTD-1 ರಲ್ಲಿ (ಚೈನೇಜ್ 0.00 ರಿಂದ 135.00 ಮೀ ವರೆಗೆ) ಅನುಮೋದಿತ ಮೈನಿಂಗ್ ಪ್ಲಾನ್ ಪ್ರಕಾರ ರಕ್ಷಣಾತ್ಮಕ ತಡೆಗೋಡೆ ಮತ್ತು ಗಾರ್ಲೆಂಡ್ ಡ್ರೈನ್ ನಿರ್ಮಿಸುವ ಕಾಮಗಾರಿಯನ್ನು ಟೆಂಡರ್ ಗುತ್ತಿಗೆದಾರರಾದ ಶ್ರೀ. ಎಂ. ಬಾಬೂಸಾಹೇಬ್, ಸಂಡೂರು ರವರು ಈ ಕಛೇರಿಯಲ್ಲಿ ಮಾಡಿಕೊಂಡ ಕರಾರು ಪತ್ರ ಹಾಗೂ ನೀಡಿರುವ ಕೆಲಸದ ಆದೇಶದಂತೆ ನಿರ್ಮಿಸಿರುತ್ತಾರೆ.

ಸದರಿ ಕಾಮಗಾರಿಯ ಅಂತಿಮ ಬಿಲ್ ಪಾವತಿಸುವ ಕುರಿತು ಇದರ ಗುಣಮಟ್ಟದ ಬಗ್ಗೆ ಅಧೀಕೃತ 3ನೇ ಪಕ್ಷಕಾರರಿಂದ ತಪಾಸಣಾ ವರದಿ ಪಡೆಯುವ ಅವಶ್ಯಕತೆ ಇರುತ್ತದೆ. ಆದುದರಿಂದ ಮೇಲ್ಕಂಡ ಸ್ಥಳಕ್ಕೆ ಭೇಟಿ ನೀಡಿ ಗುತ್ತಿಗೆದಾರರು ಈಗಾಗಲೇ ನಿರ್ಮಿಸಿರುವ ಕಾಮಗಾರಿಯ ಗುಣಮಟ್ಟ ಮತ್ತು ಮಂಜೂರಾದ ಅಂದಾಜು ಪಟ್ಟಿಯಂತೆ ಕಾಮಗಾರಿಗೆ ತಗಲಿರುವ ವೆಚ್ಚದ ಕುರಿತು ತಪಾಸಣಾ ವರದಿಯನ್ನು ಸಲ್ಲಿಸಲು **ದಿನಾಂಕ: 04.11.2023** ರ ಒಳಗಾಗಿ ತಮ್ಮಿಂದ ದರಪಟ್ಟಿಯ ಕನಿಷ್ಠ ದರ (Quotation) ಸಲ್ಲಿಸಲು ಈ ಮೂಲಕ ಕೋರಲಾಗಿದೆ.

ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 78.00 ಲಕ್ಷಗಳಾಗಿರುತ್ತವೆ. (Including 18% GST)

ಪ್ರಧಾನ ವ್ಯವಸ್ಥಾಪಕರು (ಉ)
25/10/2023

**ಅಡಕ:** ಮಂಜೂರಾದ ಅಂದಾಜು ಪಟ್ಟಿಯ ಪ್ರತಿ

**ಪ್ರತಿ:**

1) ಕೆಎಸ್ಎಂಸಿಎಲ್ ಜಾಲತಾಣದಲ್ಲಿ ಪ್ರಕಟಿಸಲು
2) ಪ್ರಧಾನ ಕಛೇರಿಯ ಸೂಚನಾ ಫಲಕಕ್ಕೆ ಮಾಹಿತಿಗಾಗಿ
3) ಉಪ ಪ್ರಧಾನ ವ್ಯವಸ್ಥಾಪಕರು (ಉ), ಸುಬ್ಬರಾಯನಹಳ್ಳಿ ಕಬ್ಬಿಣ ಅದಿರು ಗಣಿ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

82

***Detailed Estimate for construction of Retaining Wall and Garland Drain at Dump PTD-1 (Now Existing Dump) at Subbarayanahalli Iron Ore Mine (M.L. No: 2629) Chainage: 0.00 to 135.00 mtrs***

***ESTIMATED COST : RS. 78,00,000.00***

***(Rupees Seventy Eight Lakhs only)***

**KARNATAKA STATE MINERALS CORPORATION LIMITED**

**(Govt. of Karnataka Undertaking)**

**Regd. Office: BMTC, Shanthinagar,**

**TTMC Building, 'A' Block,**

**$5^{th}$ Floor, Bengaluru – 560 027.**

# ವರದಿ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯು ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು, ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸುಬ್ಬರಾಯನಹಳ್ಳಿ ಕಬ್ಬಿಣ ಅದಿರು ಗಣಿ ಹೊಂದಿದ್ದು, ಮೇಲ್ಕಂಡ ಗಣಿಯ ಡಂಪ್- (PTD–1)ರಲ್ಲಿ ಗಣಿಯ ಉತ್ಪಾದನೆಯಿಂದ ಬಂದ ತ್ಯಾಜ್ಯ ವಸ್ತುವನ್ನು ಸಂಗ್ರಹಿಸುತ್ತಿರುವ ಸ್ಥಳದಲ್ಲಿ ತ್ಯಾಜ್ಯ ವಸ್ತು ಜರಿದು ಪರಿಸರಕ್ಕೆ ಹಾನಿಯಾಗದಂತೆ 2020-21 ನೇ ಸಾಲಿನಲ್ಲಿ 67.ಮೀ. ಉದ್ದಕ್ಕೆ ಹಾಗೂ 2021-22 ನೇ ಸಾಲಿಗೆ 67 ಮೀ. ಉದ್ದಕ್ಕೆ ಒಟ್ಟಾರೆ 134 ಮೀ ಉದ್ದಕ್ಕೆ ಅನುಮೋದನೆಯಾದ ಮೈನಿಂಗ್ ಪ್ಲಾನ್‌ನಂತೆ ರಕ್ಷಣಾತ್ಮಕ ತಡೆಗೋಡೆ ಹಾಗೂ ಗಾರ್ಲ್ಯಾಂಡ್ ಡ್ರೈನ್ ನಿರ್ಮಿಸಬೇಕಾಗಿರುತ್ತದೆ. ಆದುದರಿಂದ ಅಂದಾಜು ಪಟ್ಟಿಯನ್ನು ಸುಮಾರು 135.00 ಮೀ. ಉದ್ದಕ್ಕೆ ರಕ್ಷಣಾತ್ಮಕ ತಡೆಗೋಡೆ ಮತ್ತು ಗಾರ್ಲ್ಯಾಂಡ್ ಡ್ರೈನ್ ನಿರ್ಮಿಸಲು ಲೋಕೋಪಯೋಗಿ ಇಲಾಖೆಯ 2021-22ನೇ ಸಾಲಿನ ತಾಂತ್ರಿಕ ಇಲಾಖೆಗಳ ಏಕರೂಪ ದರಪಟ್ಟಿ ಅನುಸರಿಸಿ ರೂ. 78.00 ಲಕ್ಷಗಳಿಗೆ ತಯಾರಿಸಲಾಗಿದೆ. ಸದರಿ ಮೊತ್ತದ ಅನುದಾನವನ್ನು ಸಂಸ್ಥೆಯ ವತಿಯಿಂದ ಭರಿಸಲಾಗುವುದು.

**ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಐಟಂಗಳನ್ನು ಅಳವಡಿಸಿಕೊಳ್ಳಲಾಗಿದೆ.**

1. ವಿರಳವಾಗಿ ಬೆಳೆದ ಜಂಗಲ್ ಕತ್ತರಿಸಿ ತೆಗೆಯುವುದು.
2. ರಕ್ಷಣಾತ್ಮಕ ತಡೆಗೋಡೆ ಮತ್ತು ಗಾರ್ಲ್ಯಾಂಡ್ ಡ್ರೈನ್ ನಿರ್ಮಿಸಲು ನೆಲವನ್ನು ಸಮತಟ್ಟು ಮಾಡಿಕೊಳ್ಳುವುದು.
3. ರಕ್ಷಣಾತ್ಮಕ ತಡೆಗೋಡೆ ಮತ್ತು ಗಾರ್ಲ್ಯಾಂಡ್ ಡ್ರೈನ್‌ನ ತಳಪಾಯದ ನಿರ್ಮಾಣಕ್ಕಾಗಿ ಮಣ್ಣನ್ನು ಅಗೆಯುವುದು.
4. ರಕ್ಷಣಾತ್ಮಕ ತಡೆಗೋಡೆ ಮತ್ತು ಗಾರ್ಲ್ಯಾಂಡ್ ಡ್ರೈನ್‌ನ ತಳಪಾಯಕ್ಕಾಗಿ 40 ಮಿ.ಮಿ ಮತ್ತು ಕಡಿಮೆ ಗಾತ್ರದ ಜೆಲ್ಲಿ ಬಳಸಿ 1:4:8 ಪರಿಮಾಣದ ಕಾಂಕ್ರೀಟು ಹಾಕುವುದು.
5. ರಕ್ಷಣಾತ್ಮಕ ತಡೆಗೋಡೆ ಮತ್ತು ಗಾರ್ಲ್ಯಾಂಡ್ ಡ್ರೈನ್‌ನ ನಿರ್ಮಾಣಕ್ಕಾಗಿ 1:6 ಪರಿಮಾಣದ ಸಿಮೆಂಟು ಗಾರೆ ಬಳಸಿ ಸೈಜು ಕಲ್ಲಿನ ಕಟ್ಟಡ ನಿರ್ಮಿಸುವುದು
6. ರಕ್ಷಣಾತ್ಮಕ ತಡೆಗೋಡೆಯಲ್ಲಿ ಮೇಲ್ಭಾಗದಿಂದ ಹರಿದು ಬರುವ ನೀರನ್ನು ಕೆಳಗೆ ಹರಿದು ಹೋಗಲು Weep holes ನಿರ್ಮಿಸುವುದು
7. ರಕ್ಷಣಾತ್ಮಕ ತಡೆಗೋಡೆ ಮೇಲ್ಭಾಗಕ್ಕೆ ಮತ್ತು ಗಾರ್ಲ್ಯಾಂಡ್ ಡ್ರೈನ್‌ನ ತಳಭಾಗಕ್ಕೆ 1:3:6 ಪರಿಮಾಣದ ಸಿಮೆಂಟ್ ಕಾಂಕ್ರೀಟ್ ಹಾಕುವುದು.
8. ರಕ್ಷಣಾತ್ಮಕ ತಡೆಗೋಡೆ ಮತ್ತು ಗಾರ್ಲ್ಯಾಂಡ್ ಡ್ರೈನ್‌ನ ಮಧ್ಯದಲ್ಲಿ Revetment ನಿರ್ಮಾಣ ಮಾಡುವುದು.

ಮೇಲ್ಕಂಡ ಅಂದಾಜು ಪಟ್ಟಿಗೆ ತಾಂತ್ರಿಕ ಪರಿಶೀಲನೆಯ ಅನುಮೋದನೆ ನೀಡಲು ಕೋರಿದೆ.

H. Sebbarayappa

MANAGER (CIVIL)
Karnataka State Minerals Corporation Limited
BENGALURU

General Manager (P)
Karnataka State Minerals Corporation Limited